ನನ್ನ ಓದು

# ಮಣ್ಣಗಂಧ ಮೈಗತ್ತರಿಸಿಕೊಂಡ ಸಮಾಜ ವಿಜ್ಞಾನಿಯ ವೃತ್ತಾಂತ



**ಕರ್ಕಿ ಕೃಷ್ಣಮೂರ್ತಿ**

'ಭಾರತ ಯಾಕೆ ಬಡವಾಗಿದೆ?'
'ಯಾಕೆಂದರೆ ಭಾರತದ ಹಳ್ಳಿಗಳು ಬಡವಾಗಿವೆ.'
'ಭಾರತದ ಹಳ್ಳಿಗಳೇಕೆ ಬಡವಾಗಿವೆ?'
'ಯಾಕೆಂದರೆ ಹಳ್ಳಿಗರು ಅರೆಕಾಲಿಕ ಉದ್ಯೋಗಿಗಳು. ಈ ಸಮಸ್ಯೆ ನಿರುದ್ಯೋಗಕ್ಕಿಂತ ಹೆಚ್ಚು ಸಂಕೀರ್ಣವಾದದ್ದು.'

ಇವು ಮಹಾತ್ಮಾ ಗಾಂಧಿ ತಮ್ಮದೇ ಪ್ರಶ್ನೆಗಳಿಗೆ ಕಂಡುಕೊಂಡ ಉತ್ತರಗಳು. ಸಮಸ್ಯೆಯ ಪರಿಹಾರಕ್ಕೆ ಸಲಹೆಗಳನ್ನು ನೀಡಿ ಸುಮ್ಮನಾಗದೇ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಶ್ರಮಿಸುವುದು ಗಾಂಧಿಯ ತತ್ವ ಹಾಗೂ ಕಾಯಕ ಎರಡೂ ಹೌದಷ್ಟೇ? ಈ ನಿಟ್ಟಿನಲ್ಲಿ ಗಾಂಧಿ ತಮ್ಮನ್ನು ತೊಡಗಿಸಿಕೊಂಡ ಬಗೆ ಕೂಡ ಎಲ್ಲರಿಗೂ ಗೊತ್ತಿರುವಂತಹದ್ದೇ. ಇದರಿಂದ ಬಹುವಾಗಿ ಪ್ರಭಾವಿತರಾದವರು ಡಾ. ಪ್ರಕಾಶ ಭಟ್. ಗಾಂಧಿಯೊಡನೆ ನೇರ ಸಂಪರ್ಕ ಸಾಧ್ಯವಾಗದಿದ್ದರೂ, ಗಾಂಧಿಯ ಒಡನಾಡಿಗಳಲ್ಲಿ ಒಬ್ಬರಾಗಿದ್ದ ಮಣಿಭಾಯಿ ('ಬೈಫ್' ಸಂಸ್ಥೆಯ ಸಂಸ್ಥಾಪಕ) ಅವರ ಶಿಷ್ಯನಾಗಿ ಹಳ್ಳಿಗಳ ಸುಧಾರಣೆಯ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರ ಅನುಭವದ ಮೂಸೆಯಿಂದ ರಚಿತವಾಗಿರುವ ಕೃತಿಯೇ 'ಹಳ್ಳಿಗಳನ್ನು ಕಟ್ಟುವ ಕಷ್ಟ ಸುಖ'. ಪಶು ವೈದ್ಯಕೀಯ ಸ್ನಾತಕೋತ್ತರ ಪದವೀಧರರಾಗಿ, ಅನಾಯಾಸವಾಗಿ ಒದಗಿಬಂದ ಸರ್ಕಾರಿ ಹುದ್ದೆಯನ್ನು ತ್ಯಜಿಸಿ, ಹಳ್ಳಿಯ ಮಣ್ಣಗಂಧವನ್ನು ಮೈಗತ್ತರಿಸಿಕೊಂಡ ಸಮಾಜ ವಿಜ್ಞಾನಿಯ ವೃತ್ತಾಂತವಿದು. ಹಾಗಂತ ಇದು ಲೇಖಕರ ಆತ್ಮಕಥನವಲ್ಲ; ಬದಲಿಗೆ, ಹಳ್ಳಿಯ ಆತ್ಮಗಳ ಕಥನ!

ಉತ್ತರಕನ್ನಡ ಹಾಗೂ ಧಾರವಾಡ ಜಿಲ್ಲೆಯ ಕೆಲವು ಹಳ್ಳಿಗಳನ್ನು ತಮ್ಮ ಆರಂಭದ ಕಾರ್ಯಕ್ಷೇತ್ರವಾಗಿ ಆರಿಸಿಕೊಳ್ಳುತ್ತಾರೆ ಪ್ರಕಾಶ್ ಭಟ್. ಹಳ್ಳಿಗಳಲ್ಲಿ ಕೆಲಸ ಮಾಡುವುದು ಸುಲಭವಲ್ಲ. ಅದು ಅಲ್ಲಿ ಕೆಲಸಮಾಡಲು ಕಾರ್ಯಪಡೆಯೊಂದನ್ನು ಕಟ್ಟುವ ಮೊದಲ ಹೆಜ್ಜೆಯಲ್ಲಿಯೇ ಅವರ ಅನುಭವಕ್ಕೆ ಬರುತ್ತದೆ. ಹಳ್ಳಿಗಳ ಬಗ್ಗೆ ನಗರವಾಸಿಗಳಿಗಿರುವ 'ರೊಮ್ಯಾಂಟಿಕ್ ಕಲ್ಪನೆ'ಗಳು ವಾಸ್ತವದಲ್ಲಿ ಇಲ್ಲ. ಅಲ್ಲಿ ಕಾಯಂ ಕೆಲಸ ಮಾಡಲು ಯಾರೂ ಒಪ್ಪುವುದಿಲ್ಲ. ಯಾಕೆಂದರೆ, ಗ್ರಾಮ ವಾಸ್ತವ್ಯವೆಂದರೆ ಅಲ್ಲಿಯ ಹಲವು ಅನನುಕೂಲಗಳು, ಸಹಿಸಿಕೊಳ್ಳಬೇಕಾದ ತೊಂದರೆಗಳಿಗೆ ಮಾತ್ರ ಸೀಮಿತವಾದುದಲ್ಲ. ಅದಕ್ಕೊಂದು ತಕ್ಕುದಾದ ಮನಸ್ಥಿತಿಯೂ ಬೇಕು. ಪ್ರೀತಿ-ದ್ವೇಷದ ಸಂಬಂಧಗಳನ್ನು ನಿರ್ವಹಿಸಬೇಕಾದ ಮಾನಸಿಕ ಸ್ಥಿರತೆಯನ್ನು ಕಾರ್ಯಕರ್ತರು ರೂಢಿಸಿಕೊಳ್ಳಬೇಕು. ಅದಾದ ನಂತರ ಹಳ್ಳಿಗರ ವಿಶ್ವಾಸ ಗಳಿಸಬೇಕಾದ ಮಹತ್ವದ ಸವಾಲು ಎದುರಾಗುತ್ತದೆ. ಹೊರಗಿನಿಂದ ಬಂದವರನ್ನು ಸುಲಭದಲ್ಲಿ ಅವರು